ನಟರಾಜ ಒಂದು ಕಾಲಿನಲ್ಲಿ ನಿಂತಿರುವ ಭಂಗಿಯನ್ನು ಗಮನಿಸಿದರೆ ಗೊತ್ತಾಗುತ್ತದೆ - ನೃತ್ಯವೆಂಬುದು ಜೀವನ ಸಮತೋಲನದ ಪ್ರಕ್ರಿಯೆ. ವೃತ್ತಿ ಮತ್ತು ವೈಯಕ್ತಿಕ ಜೀವನವನ್ನು ಸಮದೂಗಿಸಿಕೊಂಡು ಹೋಗುವುದು, ಅದರಲ್ಲಿಯೂ ಮದುವೆಯಾಗಿರುವ ಮಹಿಳೆ ತನ್ನ ಮಕ್ಕಳು ಮತ್ತು ಸಂಸಾರವನ್ನು ಸರಿದೂಗಿಸುವುದು ಸವಾಲೇ ಸರಿ. ಎಷ್ಟು ಮುಕ್ತ ವಾತಾವರಣವಿದೆಯೆಂದರೂ ಮಹಿಳೆಯು ಮಕ್ಕಳಿಗಾಗಿ ಸಮಯ ಕೊಡಲೇಬೇಕಾಗುತ್ತದೆ. ಮಕ್ಕಳಿಗೆ ಸಮಯ ಕೊಡಬೇಕಿಲ್ಲ ಎಂದು ಮನೆಯವರು ಹೇಳಿದರೂ, ಮಗುವಿನೊಡನೆ ಸಾಕಷ್ಟು ಹೊತ್ತು ಕಳೆಯದೇ ಇದ್ದಾಗ, ಅಮ್ಮನಾದವಳು ತಪ್ಪಿತಸ್ಥ ಭಾವನೆಯಲ್ಲಿ ನರಳುತ್ತಾಳೆ. ಮಕ್ಕಳಿಗೆ ಮನೆಯೊಂದು ಇರಬೇಕಾಗುತ್ತದೆಯಲ್ಲವೇ. ಅಂದಮೇಲೆ ಮನೆಗೂ ಮಹಿಳೆಯು ಸಮಯ ಕೊಡಬೇಕಾಗುತ್ತದೆ. ಇವೆಲ್ಲ ಒಂದಕ್ಕೊಂದು ತಳುಕು ಹಾಕಿಕೊಂಡಿರುವ ಸಂಬಂಧಗಳು. ನಾನು ಅದೃಷ್ಟವಶಾತ್ ಈ ಸಮತೋಲನವನ್ನು ಸಾಧಿಸಿದ್ದೇನೆ ಎನ್ನಬಹುದು. ಈ ಸಾಧಿಸುವಿಕೆ ಸುಲಭವಾಗಿ ದಕ್ಕಿದ್ದೇನಲ್ಲ. ಆದರೆ ಈಗ ನಾನು ಇವನ್ನೆಲ್ಲ ನಿರ್ವಹಿಸಿದೆ ಎಂದು ನಿರಾಳವಾಗುತ್ತಿದೆಯಷ್ಟೇ. ಈ ಪ್ರಕ್ರಿಯೆಯಲ್ಲಿ ನಾನು, ವೃತ್ತಿಗಾಗಲೀ, ವೈಯಕ್ತಿಕ ವಿಚಾರಕ್ಕಾಗಲೀ ಅಗತ್ಯವಿರುವ ಸಮಯವನ್ನು ಕೊಡಲೇಬೇಕಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದೇನೆ. ಕುಟುಂಬಕ್ಕಾಗಿ ಎಷ್ಟು ಬೇಕೋ ಅಷ್ಟು ಸಮಯ, ನೃತ್ಯ ಸಾಧನೆಗೆ ಎಷ್ಟು ಬೇಕೋ ಅಷ್ಟು ಸಮಯವನ್ನು ಕೊಡಬೇಕಾಗುತ್ತದೆ. ಒಂದೇ ಕಡೆ ಹೆಚ್ಚು ಒತ್ತು ಕೊಟ್ಟು ಮತ್ತೊಂದನ್ನು ಮರೆತುಬಿಡುವುದು ಸರಿಯಲ್ಲ. ಔಚಿತ್ಯ ಪ್ರಜ್ಞೆಯನ್ನು ಕಲಾವಿದರು ವೇದಿಕೆಯಲ್ಲಿ ಸಾಧಿಸಿದ ಹಾಗೆಯೇ ಅಂತರಂಗದಲ್ಲಿಯೂ, ಕುಟುಂಬದಲ್ಲಿಯೂ ಸಾಧಿಸಬೇಕಾಗುತ್ತದೆ. ಇಲ್ಲೊಂದು ಕಿವಿಮಾತು ನೆನಪಿಡಬೇಕು. ನಾವು ಒಂದು ಅವಧಿಯಲ್ಲಿ ಯಾವ ಕೆಲಸ ಮಾಡುತ್ತೇವೋ, ಅದರಲ್ಲಿ ಸಂಪೂರ್ಣವಾಗಿ ಮಗ್ನವಾಗಿರುವುದು ಕೂಡ ಅಷ್ಟೇ ಮುಖ್ಯ. ಆಗ ಸಮಯ ವ್ಯರ್ಥವಾಗುವುದಿಲ್ಲ. ಇದಕ್ಕೂ ಮಿಗಿಲಾದ ಒಂದು ಕಿವಿಮಾತಿದೆ: ಎಂದಿಗೂ ಸಾಮಾಜಿಕ ಮಾಧ್ಯಮಗಳಿಗೆ ದಾಸರಾಗದಂತೆ ಎಚ್ಚರಿಕೆ ವಹಿಸಬೇಕು. ಯಾಕೆಂದರೆ ಈ ಚಟ, ಜೀವನದ ಬಹಳಷ್ಟು ಸಮಯವನ್ನು ನುಂಗಿಹಾಕಿಬಿಡುತ್ತದೆ.

**◆ ಡಿಜಿಟಲ್ ಯುಗದಲ್ಲಿ ನೃತ್ಯ ಕಲಿಕೆಯ ಸ್ವರೂಪ ಬದಲಾಗಿದೆ. ಗುರು-ಶಿಷ್ಯ ಪರಂಪರೆಯಿಂದ ಆನ್‌ಲೈನ್ ಪರಂಪರೆಯವರೆಗೆ ನೀವು ದೀರ್ಘಕಾಲ ಈ ಕ್ಷೇತ್ರದಲ್ಲಿ ಆಗುಹೋಗುಗಳನ್ನು ನೋಡುತ್ತಾ ಬಂದವರು. ನಿಮ್ಮ ಗಮನಿಸುವಿಕೆ ಏನು?**

ನನಗೆ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳುವುದೆಂದರೆ ಅಷ್ಟೇನೂ ಇಷ್ಟವಿಲ್ಲ. ಮುಖಾಮುಖಿ ತರಗತಿಗಳಲ್ಲಿ ಕಲಿಕೆಯು ಸಂತೋಷದಾಯಕವಾಗುವುದು. ಗುರು ಶಿಷ್ಯರ ನಡುವಿನ ಸಂಬಂಧಗಳು ಕೂಡ ಅಷ್ಟೇ ಮುಖ್ಯ. ಇಂದಿನ ಕಾಲಮಾನದಲ್ಲಿ ತುರ್ತನ್ನು ಗಮನಿಸಿಕೊಂಡು ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳುತ್ತೇನೆ. ಆನ್‌ಲೈನ್ ಜೊತೆಗೆ ಆಫ್‌ಲೈನ್‌ನಲ್ಲಿಯೂ ಪಾಠ ಮಾಡುವ ಅವಕಾಶ ಮಾಡಿಕೊಂಡು ವಿದ್ಯಾರ್ಥಿಗಳನ್ನು ಭೆಟ್ಟಿಯಾಗುತ್ತೇನೆ. ವಿದೇಶಿ ವಿದ್ಯಾರ್ಥಿಗಳಾದರೆ ವರ್ಷಕ್ಕೆ ಒಂದೆರಡು ಬಾರಿಯಾದರೂ, ಕಾರ್ಯಾಗಾರ ನಡೆಸಿ, ಅವರನ್ನು ಭೇಟಿಯಾಗಿ ಕಲಿಸಿಕೊಡಲಾಗುತ್ತದೆಯೇ ಎಂದು ನೋಡುತ್ತೇನೆ. ಗುರುಶಿಷ್ಯ ಪರಂಪರೆ ಎಂಬುದು ನೃತ್ಯಪಟುಗಳಿಗೆ ಸೀಮಿತವಾದುದಲ್ಲ. ನೀವು ಯಾವುದೇ ವಿಚಾರವನ್ನು ಕಲಿಯಬೇಕಿದ್ದರೂ ಗುರುವೊಬ್ಬರ ಮಾರ್ಗದರ್ಶನ ಬೇಕು. ನೃತ್ಯ ವಿದ್ಯಾರ್ಥಿಗೆ ಗುರುವಿನ ಆಶ್ರಯ ಕೆಲವು ವರ್ಷಗಳ ಕಾಲವಾದರೂ ಬೇಕೇ ಬೇಕು. ಅದು ಕೇವಲ ನೃತ್ಯದ ಹೆಜ್ಜೆಗಾರಿಕೆ, ಅಭಿನಯವನ್ನು ಕಲಿಯುವುದಕ್ಕೆ ಸೀಮಿತವಲ್ಲ. ಬದಲಾಗಿ, ಕೊರಿಯೋಗ್ರಫಿ ಕಲಿಕೆ, ಓದುವುದು, ಬದುಕಿನ ಗ್ರಹಿಕೆ - ಹೀಗೆ ಈ ಪರಂಪರೆಯಲ್ಲಿ ಕಲಿತಾಗ ಎಲ್ಲ ವಿಚಾರಗಳಲ್ಲಿಯೂ ಮಾರ್ಗದರ್ಶನ ದೊರೆಯುವುದು. ನಮಗೆ ಬೋಧಿಸುವ ಗುರು ಪ್ರಕೃತಿಯ ಬಗ್ಗೆ ಏನು ಆಲೋಚಿಸುತ್ತಾರೆ, ಜೀವನದಲ್ಲಿ ಎದುರಾಗುವ ಒತ್ತಡಕ್ಕೆ ಹೇಗೆ ಪ್ರತಿಕ್ರಿಯಿಸುತ್ತಾರೆ, ಜೀವನದ ಕಷ್ಟ-ಸುಖಗಳನ್ನು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಕಲಿತುಕೊಳ್ಳಲು ಕೆಲವು ವರ್ಷಗಳು ಬೇಕು. ಇವೆಲ್ಲವೂ ಗುರುಗಳ ಅನುಭವ ಜ್ಞಾನದಿಂದ ಹೊರಹೊಮ್ಮುವಂತಹುದು. ಆದ್ದರಿಂದ ಸಾಮೀಪ್ಯವೇ ಇವನ್ನೆಲ್ಲ ಕಲಿಯುವುದಕ್ಕೆ ಅವಕಾಶ ಮಾಡಿಕೊಡುತ್ತದೆ.